# ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ: | 1015 (2297) |
| ಸದಸ್ಯರ ಹೆಸರು: | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 26.03.2026. |
| ಉತ್ತರಿಸುವ ಸಚಿವರು: | ಸನ್ಮಾನ್ಯ ಮುಖ್ಯಮಂತ್ರಿಯವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಾರ್ಷಿಕ ಚುನಾವಣೆಯ ಕುರಿತು ಉಚ್ಚ ನ್ಯಾಯಾಲಯದಲ್ಲಿರುವ ಪ್ರಕರಣ ವಿಲೇವಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಾರ್ಷಿಕ ಚುನಾವಣೆ ಕುರಿತು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:16517/2025 ರಲ್ಲಿ ದಿನಾಂಕ:10.06.2025 ರ ಆದೇಶದಲ್ಲಿ ದಿನಾಂಕ:22.06.2025 ರಂದು ನಡೆಯಬೇಕಿದ್ದ ಚುನಾವಣೆಗೆ ತಡೆಯಾಜ್ಞೆ ನೀಡಿರುತ್ತದೆ. ಉಚ್ಚ ನ್ಯಾಯಾಲಯದಲ್ಲಿರುವ ಪ್ರಕರಣ ವಿಲೇವಾರಿಗೆ ಇಲಾಖೆ ವತಿಯಿಂದ ಸರ್ಕಾರಿ ವಕೀಲರು ಮತ್ತು ವ್ಯಾಜ್ಯ ನಿರ್ವಹಣಾಧಿಕಾರಿಯನ್ನು ನೇಮಿಸಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸಲಾಗಿದ್ದು, ಸದರಿ ಪ್ರಕರಣದ ತಡೆಯಾಜ್ಞೆಯನ್ನು ತೆರವುಗೊಳಿಸುವ ಸಂಬಂಧ ಸರ್ಕಾರಿ ವಕೀಲರಿಗೆ ಅಗತ್ಯ ದಾಖಲಾತಿಗಳನ್ನು ಒದಗಿಸಲಾಗಿರುತ್ತದೆ.<br><br>ಸಂಘದ ಚುನಾವಣೆ ಕುರಿತಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:16517/2025 ರ ಅಂತಿಮ ತೀರ್ಪಿಗೊಳಪಟ್ಟು ಕ್ರಮವಹಿಸುವ ಬಗ್ಗೆ ಪರಿಶೀಲಿಸಲಾಗುವುದು. |
| ಆ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಡಳಿತ ಅಧಿಕಾರಿಯ ಅವಧಿಯನ್ನು ಎಷ್ಟು ಬಾರಿ ವಿಸ್ತರಿಸಲಾಗಿದೆ.; | ಸರ್ಕಾರದ ಆದೇಶದ ಸಂಖ್ಯೆ : ಸಿಒ 55 ಸಿಎಸ್‌ಆರ್ 2023, ದಿನಾಂಕ:15.03.2024 ರಲ್ಲಿ ಆರು ತಿಂಗಳ ಅವಧಿಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿದ್ದು, ನಂತರ ಆಡಳಿತಾಧಿಕಾರಿಯ ಅವಧಿಯನ್ನು 3 ಬಾರಿ ಈ ಕೆಳಗಿನಂತೆ ವಿಸ್ತರಿಸಲಾಗಿರುತ್ತದೆ.<br><br>(1) ಸರ್ಕಾರದ ಆದೇಶದ ಸಂಖ್ಯೆ:ಸಿಒ 55 ಸಿಎಸ್‌ಆರ್ 2023, ದಿನಾಂಕ:21.01.2025ರಲ್ಲಿ ದಿನಾಂಕ:15.09.2024 ರಿಂದ 14.03.2025ರವರೆಗೆ ( 6 ತಿಂಗಳು) |

| | | |
|---|---|---|
| | | (2) ಸರ್ಕಾರದ ಆದೇಶದ ಸಂಖ್ಯೆ:ಸಿಒ 55 ಸಿಎಸ್‌ಆರ್ 2023, ದಿನಾಂಕ:15.07.2025ರಲ್ಲಿ ದಿನಾಂಕ:15.03.2025 ರಿಂದ 14.09.2025 ರ ವರೆಗೆ ( 6 ತಿಂಗಳು) .<br>(3) ಸರ್ಕಾರದ ಆದೇಶ ಸಂಖ್ಯೆ:ಸಿಒ 55 ಸಿಎಸ್‌ಆರ್ 2023, ದಿನಾಂಕ:01.01.2026 ಮತ್ತು ದಿನಾಂಕ:07.01.2026ರ ತಿದ್ದುಪಡಿ ಆದೇಶದಲ್ಲಿ ದಿನಾಂಕ:15.09.2025 ರಿಂದ 14.03.2026ರ ವರೆಗೆ (6 ತಿಂಗಳು).<br><br>ದಿನಾಂಕ:15.03.2026ರಿಂದ ಮುಂದಿನ 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯವರ ಅವಧಿಯನ್ನು ವಿಸ್ತರಿಸಲು ಪ್ರಸ್ತಾವನೆ ಸ್ವೀಕೃತವಾಗಿದ್ದು, ಅವಧಿ ವಿಸ್ತರಿಸುವ ಬಗ್ಗೆ ಪರಿಶೀಲನೆಯಲ್ಲಿರುತ್ತದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ ನೀಡಿರುವ ಅನುದಾನ ಎಷ್ಟು; ಅನುದಾನದ ಬಳಕೆಯ ಸಂಪೂರ್ಣ ವಿವರವನ್ನು ನೀಡುವುದು; | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ ಕಳೆದ ಮೂರು ವರ್ಷಗಳಿಂದ ಯಾವುದೇ ಅನುದಾನ ಬಂದಿರುವುದಿಲ್ಲ. |
| ಈ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಡಳಿತ ಅಧಿಕಾರಿಯು ಪರಿಷತ್ತಿನಲ್ಲಿನ ಆರ್ಥಿಕ ಸಂಪನ್ಮೂಲ ಬಳಸಲು ಸರ್ಕಾರದ ಅನುಮತಿ ಪಡೆದಿದ್ದಾರೆಯೇ; | ಸಂಘಕ್ಕೆ ಆಡಳಿತಾಧಿಕಾರಿಯು ಕರ್ನಾಟಕ ಸಂಘಗಳ ಕಾಯ್ದೆ 1960, ಕಲಂ 27 (ಎ) ರಡಿಯಲ್ಲಿ ನೇಮಿಸಿದ್ದು, ಅದರಂತೆ ಸಂಘದ ಆಡಳಿತಾಧಿಕಾರಿಗೆ ಪ್ರತ್ಯಾಯೋಜನೆಗೊಂಡಿರುವ ಅಧಿಕಾರದನ್ವಯ ಸಂಘದ ನಿಯಮ-ನಿಬಂಧನೆಗಳನ್ವಯ ದೈನಂದಿನ ವ್ಯವಹಾರಗಳಿಗೆ ಮಾತ್ರ ಸಂಘದ ಆರ್ಥಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲಾಗಿದೆ. |
| ಉ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿನ ಪ್ರಕರಣ ಕುರಿತು ವಾದಿಸಲು ನ್ಯಾಯವಾದಿಗಳನ್ನು ನೇಮಿಸಲಾಗಿದೆಯೇ; ನೇಮಿಸದಿದ್ದರೆ ಕಾರಣವೇನು? | ಸರ್ಕಾರದ ಆದೇಶ ಸಂಖ್ಯೆ:ಸಿಒ 33 ಸಿಎಸ್‌ಆರ್ 2025, ದಿನಾಂಕ:25.06.2025ರಲ್ಲಿ ಪ್ರಕರಣದ ಕುರಿತು ನ್ಯಾಯಾಲಯದಲ್ಲಿ ವಾದಿಸಲು ಸರ್ಕಾರಿ ವಕೀಲರನ್ನು ನೇಮಿಸಲಾಗಿರುತ್ತದೆ. |

**ಸಂಖ್ಯೆ: ಸಿಒ 68 ಸಿಎಸ್‌ಆರ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ